1	2	3
5	ಪುಂಜಾಲುಕಟ್ಟ ಪುರಿಯಾ ರಸ್ತೆ ಅಭಿವೃದ್ಧಿ	13 93
6	ಹೆಂಜಿರ–ಹತ್ಯಡ್ಕ ರಸ್ತೆ ಅಭಿವೃದ್ಧಿ	13 65
7	ಪೆರಿಯಶಾಂತಿ ಕೊಕ್ಕಡ ಹುಲಿಯ ಧರ್ಮಸ್ಥಳ ರಸ್ತೆ ಅಭಿವೃದ್ಧಿ	13 56
8	ಉಜಿರೆ–ಸೂರ್ಯ–ನಡ ರಸ್ತೆ ಅಭಿವೃದ್ಧಿ	13 60
9	ಮಡ್ಡಡಕ ಮಚಿನ ರಸ್ತೆ ಅಭಿವೃದ್ಧಿ	13 64
10	ಮೂಡಿಗೆರೆ ಶಿತಿಲ ರಸ್ತೆ ಅಭಿವೃದ್ದಿ	14 12
11	ಹನಿಯೂರು – ಕೊಟ್ಟಿಗೆಹಾರ ರಸ್ತೆ ಅಭಿವೃದ್ಧಿ	14 25
12	ಧರ್ಮಸ್ಥಳ ಬೆಳಾಲ ರಸ್ತೆ ಅಭಿವೃದ್ಧಿ	13 52
	ಒಟ್ಟು	**161 58**

ಔಷಧ ನಿಯಂತ್ರಣ ಇಲಾಖೆಯ ಅವ್ಯವಹಾರ

173 (211) ಶ್ರೀ ರವೀಂದ್ರನಾಥ್ ಎಸ್ ಎ (ಮಾಯಕೊಂಡ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔಷಧ ನಿಯಂತ್ರಣ ಇಲಾಖೆಯಲ್ಲಿ ಪತ್ತೆಯಾಗಿದ್ದ ಅವ್ಯವಹಾರ ಪ್ರಕರಣವು ಯಾವ ಹಂತದಲ್ಲಿದೆ

ಆ) ಲೋಕಾಯುಕ್ತದವರು ಶಿಫಾರಸ್ಸು ಮಾಡಿದ ಅಂಶಗಳೇನು

ಇ) ಯಾರು ಯಾರು ತಪ್ಪಿತಸ್ಥರೆಂದು ಗುರುತಿಸಲಾಗಿದೆ ಇವರುಗಳಿಗೆ ಯಾವ ಶಿಕ್ಷೆ ವಿಧಿಸಲಾಗಿದೆ.

ಈ) ಲೋಕಾಯುಕ್ತರ ಶಿಫಾರಸ್ಸಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಈ ಹಗರಣದಲ್ಲಿ ಭಾಗಿಯಾದ ಇತರ ಅಧಿಕಾರಿ ಮತ್ತು ರಾಜಕೀಯ ನೇತಾರರುಗಳು ಯಾರು ವಿಚಾರಣಾ ವರದಿಯ ವಿವರಗಳನ್ನು ಒದಗಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ಅವ್ಯವಹಾರದ ಬಗ್ಗೆ ಕೂಲಂಕುಷ ಇಲಾಖಾ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ನೀಡಲು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿ ಸರ್ಕಾರದ ಆದೇಶ ಸಂಖ್ಯೆ ಆಕುಕ 279 ಎಂಎಸ್‌ಎ 2003 ದಿನಾಂಕ 13 10 2003ರಂದು ಆದೇಶಿಸಿದೆ ವರದಿ ನಿರೀಕ್ಷಿಸಲಾಗಿದೆ

ಆ) ಸನ್ಮಾನ್ಯ ಲೋಕಾಯುಕ್ತರು ತಮ್ಮ ತನಿಖಾ ವರದಿಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ತಮ್ಮ ಕರ್ತವ್ಯಲೋಪದಿಂದಾಗಿ ಕೆಳಮಟ್ಟದ ಕಲಬೆರಕೆಯ Spurious ಮತ್ತು misbranded ಔಷಧಗಳನ್ನು ತಯಾರಕ ರೊಂದಿಗೆ ಶಾಮೀಲಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಕಾರಣಕರ್ತರಾಗಿದ್ದು ಔಷಧ ನಿಯಂತ್ರಣ ಕಾಯಿದೆ ಮತ್ತು ಔಷಧ ನಿಯಂತ್ರಣ ನಿಯಮಗಳನ್ವಯ ಕಾರ್ಯ ನಿರ್ವಹಿಸದೇ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಇವರುಗಳನ್ನು ತಕ್ಷಣ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವುದರೊಂದಿಗೆ, ಈ ಅವ್ಯವಹಾರದ ಬಗ್ಗೆ ಕೂಲಂಕಷವಾಗಿ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಲೋಕಾಯುಕ್ತ ವಿಚಾರಣೆಗೊಳಪಡಿಸಲು ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿರುವರು

1) ಶ್ರೀ ಆರ್ ಆನಂದರಾಜಶೇಖರ್, ಹಿಂದಿನ ಔಷಧ ನಿಯಂತ್ರಕರು
2) ಶ್ರೀ ಹೆಚ್ ಜಯರಾಂ, ಅಪರ ಔಷಧ ನಿಯಂತ್ರಕರು
3) ಶ್ರೀ ಬಿ.ಜೆ ಪ್ರಭಾಕುಮಾರ್, ಉಪ ಔಷಧ ನಿಯಂತ್ರಕರು

ಇ) ಈ ಕೆಳಕಂಡ ಅಧಿಕಾರಿಗಳನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ

1) ಶ್ರೀ ಆರ್ ಆನಂದರಾಜಶೇಖರ್, ಹಿಂದಿನ ಔಷಧ ನಿಯಂತ್ರಕರು
2) ಶ್ರೀ ಹೆಚ್ ಜಯರಾಂ ಅಪರ ಔಷಧ ನಿಯಂತ್ರಕರು
3) ಶ್ರೀ ಬಿ ಜೆ ಪ್ರಭಾಕುಮಾರ್ ಉಪ ಔಷಧ ನಿಯಂತ್ರಕರು

ಇವರುಗಳನ್ನು ದಿನಾಂಕ 3 10 2003ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ ಹಾಗೂ ಸುದೀರ್ಘ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿದೆ ವಿಚಾರಣಾ ವರದಿ ನಿರೀಕ್ಷಿಸಲಾಗುತ್ತಿದ್ದು ವಿಚಾರಣಾ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಈ) ಮಾನ್ಯ ಲೋಕಾಯುಕ್ತರ ಶಿಫಾರಸ್ಸು ಗಳನ್ವಯ ಮೇಲ್ಕಂಡ ಅಧಿಕಾರಿಗಳನ್ನು ಈಗಾಗಲೇ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ ಹಾಗೂ ಪ್ರಕರಣದ ಕೂಲಂಕುಷ ಇಲಾಖಾ ವಿಚಾರಣೆ ನಡೆಸಲು ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸಿದೆ ಔಷಧ ನಿಯಂತ್ರಣ ಇಲಾಖೆಯ ಸುಧಾರಣೆಯ ಬಗ್ಗೆ ಕ್ರಮ ತೆಗೆದುಕೊಳ್ಳಲು ಔಷಧ ನಿಯಂತ್ರಕರಿಗೆ ಸೂಚನೆಗಳನ್ನು ನೀಡಲಾಗಿದೆ

ಉ) ಮಾನ್ಯ ಲೋಕಾಯುಕ್ತರು ಅವರ ತನಿಖಾ ವರದಿಯಲ್ಲಿ ಶ್ರೀ ಹೆಚ್ ಸಿ ಮಹಾದೇವಪ್ಪ, ಮಾಜಿ ಆರೋಗ್ಯ ಮತ್ತು ಕು ಕ ಸಚಿವರ ಹೆಸರನ್ನು ಹೆಸರಿಸಿರುತ್ತಾರೆ ಮೇಲ್ಕಂಡ ಅಧಿಕಾರಿಗಳನ್ನು ಹೊರತುಪಡಿಸಿ ಇತರೆ ಅಧಿಕಾರಿಗಳು ಭಾಗಿಯಾಗಿರುವ ಬಗ್ಗೆ ಹೆಸರಿಸಿರುವುದಿಲ್ಲ

ಗ್ರಂಥಾಲಯ ಸೆಸ್

174 (224) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಂಥಾಲಯ ಇಲಾಖೆಗೆ (ಸೆಸ್) ಬರಬೇಕಾಗಿರುವ ಕರ ಎಷ್ಟು

ಆ) ಈ ಕರವು ವಿವಿಧ ಸ್ಥಳೀಯ ಸಂಸ್ಥೆಗಳಿಂದ ಬಾಕಿ ಇರಲು ಕಾರಣವೇನು,

ಇ) ಇದರ ವಸೂಲಿಗೆ ಇಲಾಖೆಯು ಕೈಗೊಂಡ ಕ್ರಮಗಳೇನು

ಈ) ಬಾಕಿ ಉಳಿಸಿಕೊಂಡಿರುವ ಸ್ಥಳೀಯ ಸಂಸ್ಥೆಗಳ್ಯಾವುವು

ಗ್ರಂಥಾಲಯ ಸೆಸ್ ತುಂಬದ ಸದರಿ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಿಸಲು ಸರ್ಕಾರ ನಿರ್ಧರಿಸಿದೆಯೇ,

ಉ) ಸೂಪರ್ ಸೀಡ್ ಮಾಡುವ ಕ್ರಮ ಕೈಗೊಂಡರೆ ಸರ್ಕಾರಕ್ಕೆ ಇರಿಸುಮುರಿಸು ಉಂಟಾಗುವುದಿಲ್ಲವೇ (ವಿವರ ನೀಡಿ)

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ದಿನಾಂಕ 31–03–2003ರ ಅಂತ್ಯಕ್ಕೆ ರೂ 16 80 ಕೋಟಿ ಗ್ರಂಥಾಲಯ ಸೆಸ್ ಗ್ರಂಥಾಲಯ ಇಲಾಖೆಗೆ ಬರಬೇಕಾಗಿದೆ